ಮ್ಯಾಲೆ ಊರು-ಕೇರಿ ಮಂದಿ ಕೊಂಡಾಡಿದರು. ವರ್ಷ ಕಳೆದಂತೆ ಚಂದ್ರಕಾಂತಯ್ಯನೇ ಮೂವ್ವರು ವಿಧವೆಯರ ಮದುವೆಯನ್ನು ಸಂಬಂಧ ಕುದುರಿಸಿ ಮಾಡಿಸಿದ್ದ. ದೊಡ್ಡವರು ಒಂದು ದಿನ ಕರೆದು ಮಾತಾಡುತ್ತ 'ತಮ್ಮ, ನೀನೇ ನನ್ನ ನಂತರ ಮಠದ ಪೀಠಕ್ಕೆ ಬರಬೇಕಿತ್ತು. ಮದುವೆ ಬೇರೆ ನಾನೇ ಮಾಡಿಸಿಬಿಟ್ಟೆ' ಎಂದಿದ್ದರು. ದೊಡ್ಡವರು ಎಪ್ಪತ್ತನೇ ವಯಸ್ಸಿಗೆ ಕಾಲಿಟ್ಟ ಮ್ಯಾಲೆ ದೈಹಿಕವಾಗಿ ಕುಸಿದರು. ಆಗ ಮಠದ ಆಡಳಿತ ಮಂಡಳಿ ಶೋಧಿಸಿ ಈಗಿನ ಸಣ್ಣವರನ್ನು ಗುರುತಿಸಿ ಮಠಕ್ಕೆ ತಂದಿದ್ದರು. ಏಳೆಂಟು ವರ್ಷಗಳ ಕಾಲ ಸಣ್ಣವರು ಪೀಠಾಧಿಪತಿಗಳಾಗುವ ಮುನ್ನವೇ ಮಠದಲ್ಲಿದ್ದು ವ್ಯವಹಾರಗಳ ಅನುಭವ ಪಡೆಯುತ್ತಿದ್ದರು. ದೊಡ್ಡವರು ಸಣ್ಣವರಿಗೆ ಹೇಳುತ್ತಿದ್ದರಂತ:

'ಚಂದ್ರಕಾಂತಯ್ಯನನ್ನು ಜತೆಗೆ ಕರಕೊಂಡು ಕೆಲ್ಸ ಮಾಡು. ಮಠದ ಏಳ್ಗೆಗೆ, ಒಳಿತಿಗಾಗಿಯೇ ಇಪ್ಪತ್ತು ನಾಲ್ಕು ತಾಸು ಚಿಂತನ ಮಾಡ್ತಾನ. ನನಗಂತೂ ಆತ ಬಲಗೈ' ಎಂದು ಖಾಸಗಿ ಚರ್ಚೆಯಲ್ಲಿ ಹೇಳುತ್ತಿದ್ದರಂತ. ಪಟ್ಟಕ್ಕೆ ಬರುವ ಮುನ್ನವೇ ಸಣ್ಣವರ ಜತೆ ಭಿನ್ನಾಭಿಪ್ರಾಯಗಳು ಶುರುವಾಗಿದ್ದವು. ದೊಡ್ಡವರು ಮಠದ ನೆಲಮಾಳಿಗೆಯಲ್ಲಿ ಷಟ್‌ಸ್ಥಲ ಮಂಟಪ ಕಟ್ಟಿಸಿಕೊಂಡು ಧ್ಯಾನದಲ್ಲಿಯೇ ದಿನಗಳನ್ನು ಕಳೆದು ಈಗ್ಯ ಹನ್ನೊಂದು ವರ್ಷಗಳ ಹಿಂದೆಯೇ ಲಿಂಗೈಕ್ಯರಾದರು.

ಸೂಕ್ಷ್ಮ ಮನಸ್ಸಿನ ಚಂದ್ರಕಾಂತಯ್ಯ, ಮಾಂತಮ್ಮ ಮೆಲ್ಲಗೆ ಸಣ್ಣವರ ಮನೋಭಾವ ತಿಳಿದು ಜವಾಬ್ದಾರಿಯಿಂದ ಮಾಡುತ್ತಿದ್ದ ಕೆಲ್ಸಗಳನ್ನು ಕೈಬಿಡತೊಡಗಿದ್ದರು. ಮಠದಲ್ಲಿ ಕೆಲ್ಸಕ್ಕಿದ್ದ ಹತ್ತಾರು ಮಂದಿ ಏನೇ ಕೆಲ್ಸ ಮಾಡಿದ್ರೂ ಚಂದ್ರಕಾಂತಯ್ಯನ ಸೂಚನೆಯಂತೆ ಮಾಡ್ತಿದ್ದರು. ಕೇಳಿ ಮಾಡ್ತಿದ್ದರು. ಸಣ್ಣವರು ಅಧಿಕಾರಕ್ಕೆ ಬಂದರೂ ಕೆಲ್ಸದವರಿಗೆ ಚಂದ್ರಕಾಂತಯ್ಯನೇ ಕಾಣುತ್ತಿದ್ದ. 'ಕಾಲ ಬದಲಾಗಿದೆ. ನಾವು ಬದಲಾಗಿ ಹೊಂದುಕೊಂಡು ನಡಿಬೇಕು' ಎಂದು ಸಣ್ಣವರು ಹೇಳುತ್ತಿದ್ದರು. ನೂರು ವರ್ಷದ ಮಠವನ್ನು ನವೀಕರಿಸುತ್ತ ವಿಸ್ತರಿಸಿದರು. ಚಂದ್ರಕಾಂತಯ್ಯ ಹೊಸ ಮಠದಲ್ಲಿ ಉಳಿಸಿಕೊಂಡದ್ದು ಷಟ್‌ಸ್ಥಳ ಮಂಟಪ ಮಾತ್ರ. ದೊಡ್ಡವರ ಕುರುಹಿಗಾಗಿ. 'ಬಸವ ಕನ್ನಡ ಪ್ರಾಥಮಿಕ ಶಾಲೆ'ಯು ದೊಡ್ಡವರಿರುವಾಗಲೇ ಹೈಸ್ಕೂಲ್ ಆಗಿತ್ತು. ಸಣ್ಣವರು ಮಠದ ಶಿಕ್ಷಣ ಸಂಸ್ಥೆಗಳನ್ನು ವಿಸ್ತರಿಸಿದರು. ಹತ್ತಾರು ವಿದ್ಯಾಸಂಸ್ಥೆಗಳು ಉದಯಿಸಿದವು. ಸಣ್ಣವರಿಗೆ ರಾಜಕೀಯ ಪ್ರಜ್ಞೆ ಜಾಸ್ತಿಯಾಯಿತು. ಊರಿನ ಮಠದ ಆಡಳಿತ ಮಂಡಲಿ ಸದಸ್ಯರು ಸಣ್ಣವರ ಕೆಲ್ಸ ಕಾರ್ಯಗಳನ್ನು ಪ್ರೋತ್ಸಾಹಿಸಿದರು. 'ಬಸವ ಕನ್ನಡ ಶಾಲೆ'ಯನ್ನು ಸಣ್ಣವರು ಇಂಗ್ಲಿಷ್ ಮಾಧ್ಯಮ ಶಾಲೆಯನ್ನಾಗಿ ಮಾಡಿದ್ದರ ಬಗ್ಗೆ ಚಂದ್ರಕಾಂತಯ್ಯ ಅಸಮಾಧಾನ ತಾಳಿದ್ದ. ಒಂದನೇ ತರಗತಿಯಿಂದ ಹನ್ನೆರಡನೇ ತರಗತಿವರೆಗೆ ಇಂಗ್ಲಿಷ್ ಮಾಧ್ಯಮವಾಗಿತ್ತು. ಮತ್ತೆ ಡಿಗ್ರೀ ಕೋರ್ಸ್‌ಗಳೂ ನಡೆಯತೊಡಗಿದ್ದವು. ದೊಡ್ಡವರ ಕನ್ನಡ ಪ್ರೇಮದ ಕುರುಹು ಆಗಿದ್ದ ಶಾಲೆ ಮಾಸಿ ಹೋಗಿತ್ತು. 'ಚಂದ್ರಕಾಂತಣ್ಣ, ಕನ್ನಡ ಮೀಡಿಯಂನಲ್ಲಿ ಕಲಿವ ಮಕ್ಳು, ಕಲಿಸುವ ಪೋಷಕರು ದಿನೇದಿನೇ ಕಮ್ಮಿಯಾಗ್ತಿದ್ದಾರ. ಒಂದೂವರೆ ಸಾವಿರ ಮಕ್ಳು ಈಗ ಕಲಿತಿದ್ದಾರ' ಎಂದು ರಮಿಸಿದರು. ಭಕ್ತರು ಕಾಣಿಕೆಯಾಗಿ ನೀಡುತ್ತಿದ್ದ ಆಕಳು ಕರುಗಳ ಸಂಖ್ಯೆ ಗಣನೀಯವಾಗಿ ಬೆಳೆದು ಹಾಲು ಹೈನ ಡೈರಿಗೆ ಮಾರಾಟ ಮಾಡುತ್ತಿದ್ದರು. ಶಿವರುದ್ರಯ್ಯ ನೋಡಿಕೊಳ್ಳುತ್ತಿದ್ದ ಭಕ್ತರ ಕಾಣಿಕೆ ದವಸ ಧಾನ್ಯದಲ್ಲಿ ಭಾರಿ ಹೆಚ್ಚಳವಾಗಿತ್ತು. ಅದು ಮಾರಾಟವಾಗುತ್ತಿತ್ತು! ಎಲ್ಲ ಬದಲಾವಣೆಗಳನ್ನು ಕಂಡು ಚಂದ್ರಕಾಂತಯ್ಯ ಅಸಹಾಯಕನಾದ. ಆದರೆ ಸಣ್ಣವರಿಗೆ ನಿಷ್ಠುರವಾಗಿ ಸೂಚನೆಗಳನ್ನೂ ಕೊಡುತ್ತಿದ್ದ.

ಎರಡು ಪ್ರಕರಣಗಳನ್ನು ಚಂದ್ರಕಾಂತಯ್ಯ ಮಠದ ಸಭೆಯಲ್ಲಿ ವಿರೋಧಿಸಿದ. ಈ ಮಠ ಬಸವ ಮತ್ತು ಶರಣರ ಪರಂಪರೆಗೆ ಸೇರಿದ್ದು. ಈಗೀಗ ಸನಾತನಿಯ ಕಾರ್ಯಕ್ರಮಗಳು ಮಠದಲ್ಲಿ ಹೆಚ್ಚಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದ್ದ. ರಾಷ್ಟ್ರಮಟ್ಟದಲ್ಲಿ ಒಂದು ದೇವಸ್ಥಾನ ನಿರ್ಮಾಣವಾಗುತ್ತಿತ್ತು. ರಾಜ್ಯದಾದ್ಯಂತ ಭಕ್ತರು ಇಟ್ಟಿಗೆಗಳನ್ನು ಅರ್ಪಿಸುತ್ತಿದ್ದರು. ಮಠದಲ್ಲೂ ಇಟ್ಟಿಗೆ ಅರ್ಪಿಸುವ ದೊಡ್ಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಚಂದ್ರಕಾಂತಯ್ಯ 'ನಮ್ಮದು ಬಸವ ತತ್ತ್ವದ ಮಠ. ದೇವಾಲಯ ಸಂಸ್ಕೃತಿ ಶರಣರದ್ದಲ್ಲ.